ಮನೆಯ ಮುಂಭಾಗದ ಜಗುಲಿಯ ಮೇಲೆ ಹಾಕಿಕೊಂಡ ಈಸೀ ಚೇರ್‌ನಲ್ಲಿ ಕುಳಿತು ಎಂದಿನಂತೆ ಬೆಳಗ್ಗಿನ ಪೇಪರನ್ನು ಓದಲು ತಯಾರಾಗುತ್ತಿದ್ದ ಶಾಂತಾರಾಮ. ಮನೆಯ ಎದುರಿಗೆ ಇದ್ದ ರಸ್ತೆಗೂ ಇವ ಕುಳಿತ ಜಗುಲಿಗೂ ಒಂದು ಹದಿನೈದು ಇಪ್ಪತ್ತು ಅಡಿಗಳ ಅಂತರ. ನಡುವೆ ಮನೆಯ ಕಾಂಪೌಂಡಿನ ಗೋಡೆ ಮತ್ತು ಆ ಗೋಡೆಯೊಳಗಡೆ ಒಂದು ನಾಲ್ಕಾರು ಸಾಲು ತರಕಾರಿ ಮತ್ತು ಹೂವಿನ ಗಿಡಗಳು. ಬೆಳಗ್ಗೆ ಇವ ಏಳುವ ಮೊದಲೇ ಬರುತ್ತಿದ್ದ ಆ ಪೇಪರಿನ ಹುಡುಗ 'ರಸ್ತೆಯಿಂದಲೇ ಪೇಪರನ್ನು ಎಸೆದು ಹೋಗುತ್ತಾನೆ' ಎಂದು ಇವನಿಗಿಂತ ಮೊದಲೇ ಎದ್ದು ಮನೆಕೆಲಸದಲ್ಲಿ ತೊಡಗಿರುತ್ತಿದ್ದ ಅವನ ಹೆಂಡತಿ ಶ್ಯಾಮಲೆ ಹೇಳುತ್ತಾಳೆ. 'ಕೆಲವೊಮ್ಮೆ ಅವ ಎಸೆಯುವ ಪತ್ರಿಕೆ ಜಗುಲಿಯವರೆಗೆ ಬರುವುದೇ ಇಲ್ಲ. ಅಲ್ಲಿ ಗಿಡಗಳ ಸಂದಿಯಲ್ಲಿ ಬಿದ್ದಿರುತ್ತದೆ. ಅದನ್ನು ನೋಡಿಯೂ ನೋಡದವನಂತೆ ಆ ಹುಡುಗ ಹೋಗಿಯೇ ಬಿಡುತ್ತಾನೆ. ನಾನೇ ಅದನ್ನು ತಂದು ಜಗುಲಿಯ ದಂಡೆಯ ಮೇಲೆ ಇಡುವುದು' ಎಂದೂ ಹೇಳುತ್ತಾಳೆ.

ಹಾಗೆ ಆಕೆ ಹೇಳಿದ್ದನ್ನು ಕೇಳಿ ಒಂದು ಬಾರಿ ಆ ಹುಡುಗನನ್ನು ಕರೆದು ಸರಿಯಾಗಿ ಬೈದು ಬುದ್ಧಿಹೇಳಬೇಕು ಎಂದುಕೊಂಡದ್ದು ಎಷ್ಟು ಸಲವೋ. ಆದರೆ, ಒಮ್ಮೆಯೂ ಆ ಹುಡುಗ ಬರುವುದಕ್ಕೆ ಮುಂಚೆ ಏಳಲಿಕ್ಕಾಗದ ಇವನಿಗೆ ಅದು ಸಾಧ್ಯವಾಗಿರಲೇ ಇಲ್ಲ. ಹಾಗಾಗಿಯೇ ಆ ಹುಡುಗ ಬೇಜವಾಬ್ದಾರಿತನದಿಂದ ಪೇಪರನ್ನು ಎಸೆದು ಹೋಗುವುದು ಮುಂದುವರಿದೇ ಇತ್ತು. ಕೆಲವೊಮ್ಮೆ ಹಾಗೆ ಎಸೆದು ಹೋದ ಪೇಪರಿಗೆ ಗಿಡಗಳ ಬುಡದಲ್ಲಿದ್ದ ಮಣ್ಣು ಅಂಟಿಕೊಳ್ಳುತ್ತದೆ. ಅದನ್ನು ಮೈ ಮೇಲೆ, ಜಗಲಿಯ ನೆಲದ ಮೇಲೆ ಬೀಳದಂತೆ ಕೊಡವಿಕೊಳ್ಳುವುದೂ ಒಂದು ಕೆಲಸವೇ. ಹಾಗೆಂದು ಅದನ್ನು ಹೆಂಡತಿಗೆ ಹೇಳಲಾರ. ಎಲ್ಲಿಯಾದರೂ ಹೇಳ ಹೋದರೆ ಅದನ್ನು ತನ್ನ ಮೇಲಿನ ದೂರು ಎಂದೇ ಪರಿಗಣಿಸುವ ಆಕೆ, 'ಅದನ್ನೇ ಪೇಪರು ಹಾಕುವ ಹುಡುಗನಿಗೆ ಯಾಕೆ ಹೇಳಲು ಆಗುವುದಿಲ್ಲ ನಿಮಗೆ. ತಿಂಗಳು ತಿಂಗಳೂ ತಪ್ಪದೆ ವಸೂಲಿಗೆ ಬರುವ ಅವನಿಗೆ ಬಿಲ್ಲಿನ ಮೇಲೆ ಭಕ್ಷೀಸು ಎಂದು ಹತ್ತಿಪ್ಪತ್ತು ಸೇರಿಸಿ ಕೊಡುತ್ತೀರಿ' ಎಂದು ದಬಾಯಿಸುತ್ತಾಳೆ ಎನ್ನುವ ಹೆದರಿಕೆ ಇವನಿಗೆ.

★★★

ಇಂದೂ ಹಾಗೆಯೇ. ಪೇಪರಿಗೆ ಅಂಟಿಕೊಂಡಿದ್ದ ಮಣ್ಣನ್ನು ಕೊಡವುತ್ತ ರಸ್ತೆಯ ಕಡೆ ದೃಷ್ಟಿ ಹಾಯಿಸಿದ. ನೋಡುತ್ತಿದ್ದಂತೆಯೇ ಮನೆಯೆದುರಿಗೇ ಒಂದು ಆಟೊ ಬಂದು ನಿಂತಿತು. ಮನೆಯೆದುರಿನ ಆ ರಸ್ತೆಯ ಮೇಲೆ ದಿನಕ್ಕೆ ಒಂದೆರಡು ಸಿಟಿ ಬಸ್ಸುಗಳೂ ಓಡಾಡುತ್ತವೆ. ಅಂತಹ ರಸ್ತೆಯಲ್ಲಿ ಬೆಳಗಾ ಬೆಳಗ್ಗೆ ಆಟೊ ಬಂದು ನಿಂತಿತೆಂದರೆ ಯಾರೋ ಪರ ಊರಿನಿಂದ ರಾತ್ರಿ ಬಸ್ಸಿಗೆ ಬಂದವರು ಆಟೊ ಹತ್ತಿ ಇಲ್ಲಿಗೆ ಬಂದಿದ್ದಾರೆ ಎಂದೇ ಅರ್ಥ. ಯಾರ ಮನೆಯೆದುರಿಗೆ ಆಟೊ ನಿಲ್ಲುತ್ತದೆಯೋ ಅವರಿಗಂತೂ ತೀರಾ ಕುತೂಹಲ. ಬಂದವರು ಯಾರು... ಎಂದು. ತಮ್ಮ ಮನೆಗೇ ಬಂದಿರಬಹುದೇ ಎನ್ನುವುದು ಒಂದಾದರೆ, ಯಾರಪ್ಪ ಅದು ಮುಂದಾಗಿ ಹೇಳದೆಯೇ ಬಂದವರು ಎಂದು ಒಂದು ತೆರನ ಗಡಿಬಿಡಿಯೂ.

ಅವ ಪೇಪರನ್ನು ಹಾಗೆಯೇ ಹಿಡಿದುಕೊಂಡು ತುಸು ಹೊತ್ತು ಆಟೊದತ್ತಲೇ ನೋಡುತ್ತ ಕುಳಿತ.